ಕುದುರೆಮುಖ ಅಂದವಾದ ಬಗೆ...

ಪ್ರವೀಣ್ ಭಾರ್ಗವ್

ಪರಿಸರ

ಸಾರ್ವಜನಿಕ ವಲಯದ ದೈತ್ಯ ಕಂಪನಿಯಾದ ಕುದುರೆಮುಖ ಕಬ್ಬಿಣ ಅದಿರು ಕಂಪನಿಗೆ 2005ರ ಹೊತ್ತಿಗೆ ಗಣಿಗಾರಿಕೆಯನ್ನು ನಿಲ್ಲಿಸುವಂತೆ ಸುಪ್ರೀಂ ಕೋರ್ಟ್ 2002ರಲ್ಲಿ ಆದೇಶ ನೀಡಿತು. ಇದರೊಂದಿಗೆ ಭಾರತದ ಅತಿದೊಡ್ಡ ವನ್ಯಜೀವಿ ಸಂರಕ್ಷಣಾ ವಿಜಯ ಸಾಧಿಸಿದಂತಾಯಿತು. ಈ ಕಾನೂನು ಸಮರವನ್ನು 'ವೈಲ್ಡ್‌ಲೈಫ್ ಫಸ್ಟ್' ಆರಂಭಿಸಿತ್ತು. ಇದು ಹುಲಿಗಳು ಮತ್ತು ಸಿಂಗಳೀಕಗಳನ್ನು ಉಳಿಸುವ ಹೋರಾಟ ಮಾತ್ರವಾಗಿರದೆ ಲಕ್ಷಾಂತರ ಸಣ್ಣ ರೈತರು ನೀರಿಗಾಗಿ ಅವಲಂಬಿಸಿದ್ದ ಭದ್ರಾ ನದಿಯನ್ನು ಮಾಲಿನ್ಯದಿಂದ ಮುಕ್ತಗೊಳಿಸುವ ಹೋರಾಟವೂ ಆಗಿತ್ತು.

ಇಷ್ಟಾದರೂ, ಸುಪ್ರೀಂ ಕೋರ್ಟ್ ತೀರ್ಪು ನೀಡಿದ ನಂತರವೂ ಒಂದು ದಶಕದ ಕಾಲ ವೈಲ್ಡ್‌ಲೈಫ್ ಫಸ್ಟ್ ಕುದುರೆಮುಖ ರಾಷ್ಟ್ರೀಯ ಉದ್ಯಾನ ಮತ್ತು ಗಣಿಗಾರಿಕೆಯ ಘಾತಕ ದುಷ್ಪರಿಣಾಮಗಳಿಂದ ಸಂರಕ್ಷಿಸಲು ನಡೆಸಿದ ಹೋರಾಟ ಅನೇಕರಿಗೆ ಗೊತ್ತಿಲ್ಲ. ಗಣಿಗಾರಿಕೆಯನ್ನು ನಿಲ್ಲಿಸುವ ಪ್ರಕ್ರಿಯೆಯ ನಿಗಾವಣೆಯನ್ನು ಬೆದರಿಸಿ, ನಿಲ್ಲಿಸಲು ಹದಿನೆಂಟು ಜನ ವನ್ಯಜೀವಿ ಸಂರಕ್ಷಣಾವಾದಿಗಳ ಮೇಲೆ ಹದಿನಾಲ್ಕು ಕ್ರಿಮಿನಲ್ ಮೊಕದ್ದಮೆಗಳನ್ನು ಜಡಿಯಲಾಗಿತ್ತು. ಮುಂಚೂಣಿ ಹೋರಾಟಗಾರರ ಮೇಲೆ ಮಾನನಷ್ಟದ ಕತೆಗಳನ್ನು ಕಟ್ಟಿ ಮಾಧ್ಯಮಗಳಲ್ಲಿ ಹರಿಯಬಿಡಲಾಗಿತ್ತು. ಅದೇನೇ ಇದ್ದರೂ, ಕರ್ನಾಟಕ ಹೈಕೋರ್ಟ್ ಮಧ್ಯ ಪ್ರವೇಶಿಸಿ ಹೋರಾಟಗಾರರಿಗೆ ಕಿರುಕುಳ ಕೊಡುವುದನ್ನು ನಿಲ್ಲಿಸಿದ್ದು ಮಾತ್ರವಲ್ಲದೆ ಅವರ ಮೇಲೆ ಹಾಕಲಾಗಿದ್ದ ಎಲ್ಲ ಕ್ರಿಮಿನಲ್ ಮೊಕದ್ದಮೆಗಳನ್ನು ರದ್ದುಗೊಳಿಸಲಾಯಿತು. ಒಬ್ಬ ಅರಣ್ಯಾಧಿಕಾರಿಯು ದುರುದ್ದೇಶದಿಂದ ಕಾರ್ಯವೆಸಗಿದ್ದನ್ನು ಗಂಭೀರವಾಗಿ ಗಮನಿಸಿತ್ತು.

2004ರ ಮಾರ್ಚ್ ಮತ್ತು ನವೆಂಬರ್ ನಡುವಿನ ಅವಧಿಯಲ್ಲಿ, ಹೋರಾಟಗಾರರ ವಿರುದ್ಧ ಹದಿನೆಂಟು ಕೇಸುಗಳನ್ನು ರಭಸದಿಂದ ನಡೆಸಲಾಗುತ್ತಿದ್ದ ಸಂದರ್ಭದಲ್ಲಿ ಗಣಿಗಾರಿಕೆ ಕಂಪನಿ ವನ್ಯಜೀವಿ ಆವಾಸಗಳನ್ನು ಗಂಭೀರವಾಗಿ ಹಾನಿಗೀಡು ಮಾಡುವ ಪ್ರಕರಣಗಳನ್ನು ಪರಿಗಣಿಸದೆ ಬಿಟ್ಟುಬಿಡಲಾಯಿತು. ಕುದುರೆಮುಖ ಅದಿರು ಕಂಪನಿಯಿಂದ ವಿವಿಧ ಉಲ್ಲಂಘನೆಗಳಿಗಾಗಿ ₹ 139 ಕೋಟಿ ವಸೂಲು ಮಾಡಬೇಕಾಗಿದ್ದ ಪ್ರಕರಣಗಳನ್ನು ಮುನ್ನಡೆಸಲು ಕ್ರಮವನ್ನೇ ತೆಗೆದುಕೊಂಡಿರದುದನ್ನು ಜುಲೈ 2009ರಲ್ಲಿ ರಾಜ್ಯ ಶಾಸನಸಭೆಯಲ್ಲಿ ಮಂಡಿಸಲಾದ ಸಾರ್ವಜನಿಕ ಲೆಕ್ಕಪತ್ರ ವರದಿ ಬಯಲು ಮಾಡಿತು. ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಕಠಿಣ ಆದೇಶಗಳ ನಡುವೆಯೂ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಒಂದು ದಶಕದ ನಂತರವೂ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ.

ಇಷ್ಟರ ನಡುವೆಯೂ ಜನವರಿ 2006ರಿಂದ ಗಣಿಗಾರಿಕೆ ನಿಂತಿದ್ದು ಸುಪ್ರೀಂ ಕೋರ್ಟ್ ಮತ್ತು ಕೇಂದ್ರ ಉನ್ನತಾಧಿಕಾರ ಸಮಿತಿ ಗಟ್ಟಿಯಾಗಿ ನಿಂತದ್ದರಿಂದ. ಆದರೂ ಕುದುರೆಮುಖ ಅದಿರು ಕಂಪನಿ ವಾಯಿದೆ ಮುಗಿದಿದ್ದ ಭೋಗ್ಯದ ಸ್ಥಳದಿಂದ ಇಳಿಜಾರಿನ ಭದ್ರತೆ ಮತ್ತು ಭದ್ರಾ ನದಿ ಸಂರಕ್ಷಣೆಯ ನೆಪಹೇಳಿ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿ 2006ರ ಡಿಸೆಂಬರ್ 15ರಂದು ನೀಡಿದ ಎರಡನೇ ತೀರ್ಪಿನ ನಂತರವೂ ಹೊರಹೋಗಲಿಲ್ಲ. ಕುದುರೆಮುಖ ಅದಿರು ಕಂಪನಿ ಮತ್ತೊಂದು ಮೇಲ್ಮನವಿಯನ್ನು ಸಲ್ಲಿಸಿತು. ಆದರೆ, ಸುಪ್ರೀಂ ಕೋರ್ಟ್ ಮಣಿಯಲಿಲ್ಲ.


ಕುದುರೆಮುಖದಲ್ಲಿ ಗಣಿಗಾರಿಕೆ ನಡೆದ ಜಾಗ 2003ರಲ್ಲಿ...


ಗಣಿಗಾರಿಕೆ ನಡೆದ ಜಾಗದ 2017ರ ಚಿತ್ರ ಹಸಿರು ಹೊದಿಕೆ ಮೂಡಿರುವುದನ್ನು ತೋರಿಸಿದೆ. (ಚಿತ್ರ: ಗೂಗಲ್ ಅರ್ಥ್)


2002ರಲ್ಲಿ ತೆಗೆದ ಭದ್ರಾ ನದಿಯ ಚಿತ್ರ


2010ರಲ್ಲಿ ತೆಗೆದ ಭದ್ರಾ ನದಿಯ ಚಿತ್ರ ನೀರು ತಿಳಿಯಾಗಿದ್ದನ್ನು ತೋರಿಸುತ್ತದೆ.

ಕುದುರೆಮುಖ ಅದಿರು ಕಂಪನಿಯು ತನ್ನ ಟೌನ್‌ಶಿಪ್‌ಅನ್ನು ಪರಿಸರ ಪ್ರವಾಸೋದ್ಯಮಕ್ಕೆ ಬಳಸಲು ಮಾಡಿದ ಕೋರಿಕೆಯನ್ನೂ ನ್ಯಾಯಾಲಯ ತಿರಸ್ಕರಿಸಿತು. ಕಂಪನಿ ಎರಡನೇ ತೀರ್ಪಿನ ವಿರುದ್ಧ ಮತ್ತೊಂದು ಮೇಲ್ಮನವಿಯನ್ನು ಸಲ್ಲಿಸಿತು. ಆದರೆ ಸುಪ್ರೀಂ ಕೋರ್ಟ್ ಮಣಿಯಲಿಲ್ಲ. ತನ್ನ ಮೊಂಡುತನದಿಂದ ಕಾನೂನನ್ನು ಪಾಲಿಸದ ಅದಿರು ಕಂಪನಿ ದಾರಿ ಕಾಣದಂತೆ ಮಾಡಿಕೊಂಡಿತು. ಕಾನೂನಾತ್ಮಕ ಆಯ್ಕೆಗಳು ತೀರಿದ ಮೇಲೆ ಕುದುರೆಮುಖ ಅದಿರು ಕಂಪನಿ, ಕುದುರೆಮುಖ ರಾಷ್ಟ್ರೀಯ ಉದ್ಯಾನದ ಹೃದಯಭಾಗದಲ್ಲಿದ್ದ ತನ್ನ ಗಣಿಗಾರಿಕೆಗೆ ಬಳಸಲಾಗುತ್ತಿದ್ದ ಬೃಹತ್ ಯಂತ್ರೋಪಕರಣಗಳನ್ನು ತೆರವುಗೊಳಿಸಬೇಕಾದ ಅನಿವಾರ್ಯ ಸ್ಥಿತಿ ಎದುರಿಸಬೇಕಾಯಿತು. 2014ರ ಗೂಗಲ್ ಉಪಗ್ರಹಚಿತ್ರಗಳು ಅದು ಇನ್ನೂ ತೆರವುಗೊಳಿಸಿರದೇ ಇದ್ದುದನ್ನು ಸ್ಪಷ್ಟವಾಗಿ ತೋರಿಸುತ್ತಿತ್ತು. ಆದರೆ, 2017ರ ಉಪಗ್ರಹ ಚಿತ್ರಗಳಷ್ಟೇ ಗಣಿಗಾರಿಕೆ ಸ್ಥಾವರವನ್ನು ತೆರವುಗೊಳಿಸಿರುವುದನ್ನು ಸ್ಥಿರೀಕರಿಸುತ್ತವೆ.

> ಸುಪ್ರೀಂ ಕೋರ್ಟ್‌ನ ಮಹತ್ವದ ತೀರ್ಪುಗಳಿಂದಾಗಿ ಭದ್ರಾ ನದಿ ಪುನಶ್ಚೇತನಗೊಂಡಿದೆ.

ಕುದುರೆಮುಖ ಕಂಪನಿಯು ನಿರ್ಲಕ್ಷ್ಯದಿಂದ, ಮಾನ್ಯವಾಗಿದ್ದ ಭೋಗ್ಯವೂ ಇರದೆ, ಆ ಪ್ರದೇಶದ ಮಾಲೀಕನಂತೆ ವರ್ತಿಸುತ್ತಿತ್ತು. ಸುಪ್ರೀಂ ಕೋರ್ಟ್ ಎಲ್ಲ ಅಭಿವೃದ್ಧಿ ಚಟುವಟಿಕೆಗಳಿಗೆ ಹೊಸದಾಗಿ ವಿಧಿಸಿದ್ದ ನೆಟ್ ಪ್ರೆಸೆಂಟ್ ವ್ಯಾಲ್ಯೂ ತೆರಿಗೆ ಕುದುರೆಮುಖದ ಸಂದರ್ಭದಲ್ಲಿ ಸುಮಾರು ₹ 520 ಕೋಟಿಯಷ್ಟು ವಸೂಲಾಗಬೇಕಾಗಿತ್ತು. ಎಲ್ಲ ಕಾನೂನು ಸೂತ್ರಗಳನ್ನು ನಿರ್ಲಕ್ಷಿಸಿ ಅದರ ಕಟ್ಟಡಗಳನ್ನು ರಾಜಕೀಯ ಒಡನಾಟವಿದ್ದ ವ್ಯಾಪಾರಿಯೊಬ್ಬರಿಗೆ ಉಪಭೋಗ್ಯಕ್ಕೆ ವೈಭವೋಪೇತ ಪರಿಸರ ಪ್ರವಾಸೋದ್ಯಮ ರೆಸಾರ್ಟ್ ನಿರ್ಮಿಸಲು ನೀಡಿತು.

ಬೆಳವಣಿಗೆಗಳನ್ನು ಹತ್ತಿರದಿಂದ ಗಮನಿಸುತ್ತಿದ್ದ ವೈಲ್ಡ್‌ಲೈಫ್ ಫಸ್ಟ್, ಮುಖ್ಯ ಕಾರ್ಯದರ್ಶಿ ಹಾಗೂ ಇತರ ಹಿರಿಯ ಅಧಿಕಾರಿಗಳಿಗೆ ವೈಭವೋಪೇತ ಪರಿಸರ ಪ್ರವಾಸೋದ್ಯಮ ರೆಸಾರ್ಟ್ ಸ್ಥಾಪನೆಯನ್ನು ನಿಲ್ಲಿಸಲು ತುರ್ತಾಗಿ ಮಧ್ಯಪ್ರವೇಶಿಸಬೇಕೆಂಬ ಮನವಿಗಳ ಸರಮಾಲೆಯನ್ನೇ ಸಲ್ಲಿಸಿತು. ಆ ರೆಸಾರ್ಟ್ ವ್ಯಾವಹಾರಿಕವಾಗಿ ಕಾರ್ಯನಿರ್ವಹಿಸಲು ಆರಂಭಿಸಿದಾಗ, ವೈಲ್ಡ್‌ಲೈಫ್ ಫಸ್ಟ್ ಮತ್ತೊಂದು ರಿಟ್ ಅರ್ಜಿಯನ್ನು ಕರ್ನಾಟಕದ ಹೈಕೋರ್ಟ್‌ನಲ್ಲಿ ಸಲ್ಲಿಸಿತು. ಸದರಿ ನ್ಯಾಯಾಲಯವು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು (ಅರಣ್ಯ) ಇವರಿಗೆ ಈ ವಿಷಯವನ್ನು ಪರಿಶೀಲಿಸಿ ಸೂಕ್ತ ಆದೇಶಗಳನ್ನು ನೀಡಲು ನಿರ್ದೇಶಿಸಿತು. ವೈಲ್ಡ್‌ಲೈಫ್ ಫಸ್ಟ್ ಹೆಚ್ಚುವರಿ ಮುಖ್ಯಕಾರ್ಯದರ್ಶಿಗಳ ಮುಂದೆ ದೃಢವಾಗಿ ತನ್ನ ವಾದ ಮಂಡಿಸಿ, ವೈಭವೋಪೇತವಾದ ಎಕೊಟೂರಿಸಂ ರೆಸಾರ್ಟ್ ಸ್ಥಾಪನೆಯು ಕಾನೂನು ವಿರೋಧಿ ಎಂದು ಸಾಧಿಸಿತು. ಇದನ್ನಾಲಿಸಿದ ಹೆಚ್ಚುವರಿ ಕಾರ್ಯದರ್ಶಿಗಳು ಮುಖ್ಯ ವನ್ಯಜೀವಿ ವಾರ್ಡನ್ನರಿಗೆ ಸೂಕ್ತ ಕಾನೂನು ಕ್ರಮ ಜರುಗಿಸಲು ನಿರ್ದೇಶಿಸಿದರು. ಅಂತಿಮವಾಗಿ ಇದು ಆ ರೆಸಾರ್ಟ್ ಮುಚ್ಚಲು ಕಾರಣವಾಯಿತು.

ಸುಪ್ರೀಂ ಕೋರ್ಟ್‌ನ ಈ ಮಹತ್ವದ ತೀರ್ಪುಗಳಿಂದಾಗಿ ಇಲ್ಲಿರುವ ಚಿತ್ರಗಳು ತೋರಿಸುವಂತೆ ಭದ್ರಾ ನದಿ ಪುನಃಶ್ಚೇತನಗೊಂಡಿದೆ. ದೇಶವು ಗಂಭೀರವಾದ ನೀರಿನ ಸಮಸ್ಯೆಯನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಲಕ್ಷಾಂತರ ಮಂದಿ ರೈತರ ಜೀವಸೆಲೆಯಾದ ಭದ್ರಾ ನದಿಯ ಸಂರಕ್ಷಣೆ ರಾಜಕೀಯ ಮತ್ತು ಆಡಳಿತದ ನಾಯಕರು ಅಭಿವೃದ್ಧಿಯ ನೆಪದಲ್ಲಿ ಪರಿವೆಯಿಲ್ಲದೆ ಅನುಮತಿಗಳನ್ನು ಕೊಡಬೇಕಾದ ಸಂದರ್ಭಗಳಲ್ಲಿ ಕಲಿಯಲೇಬೇಕಾದ ಅತಿ ಮುಖ್ಯವಾದ ಪಾಠ.

ಕುದುರೆಮುಖ ಗಣಿಗಾರಿಕೆಯ ವಿರುದ್ಧದ ಹೋರಾಟವು ಗುರುತಿಸಿ ಸರಿಪಡಿಸಬೇಕಾಗಿರುವ, ಯೋಜನಾ ನೀತಿಯಲ್ಲಿನ ಮೂರು ಬಹುಮುಖ್ಯ ದೋಷಗಳನ್ನು ಸ್ಪಷ್ಟವಾಗಿ ಮುನ್ನೆಲೆಗೆ ತಂದಿತು. ಒಂದು, ಅತಿಹೆಚ್ಚು ಮಳೆಬೀಳುವ ಮತ್ತು ಮೂರು ಮುಖ್ಯ ನದಿಗಳ ಉಗಮ ಸ್ಥಾನದಲ್ಲಿ ಕೀಳುದರ್ಜೆಯ ಕಬ್ಬಿಣದ ಅದಿರನ್ನು ಗಣಿಗಾರಿಕೆ ಮಾಡುವುದರಲ್ಲಿನ ಅಪಾಯಗಳು; ಎರಡು, ನೈಸರ್ಗಿಕ ಕಾಡಿನ ನಾಶವನ್ನು ಮರ ನೆಟ್ಟು ಸರಿದೂಗಿಸಬಹುದೆಂಬ ತರ್ಕದೋಷ; ಮತ್ತು ಮೂರು, ಕಬ್ಬಿಣದ ಅದಿರನ್ನು ಕಡಿಮೆ ರಾಯಧನದಲ್ಲಿ ರಫ್ತು ಮಾಡುವುದು ದೇಶದ ದೂರಗಾಮಿ ಹಿತದೃಷ್ಟಿಯಲ್ಲ. ಕುದುರೆಮುಖ ಹೋರಾಟವು ಇದು ಕೇವಲ 'ಪರಿಸರ ಮತ್ತು ಅಭಿವೃದ್ಧಿ'ಯ ಸಂಘರ್ಷ ಎಂಬ ಕ್ಲೀಷೆಯಲ್ಲ. ಇದೊಂದು ಹಿಂದೆ ಘಟಿಸಿದ, ಜೀವಿವೈವಿಧ್ಯ ಮತ್ತು ನದಿ ವ್ಯವಸ್ಥೆಗೆ ಘಾತಕವಾಗಿ ಪರಿಣಮಿಸಿದ ವಿವೇಕಶೂನ್ಯ ಅಭಿವೃದ್ಧಿ ದೋಷ ಎಂಬುದನ್ನು ಮನವರಿಕೆ ಮಾಡುತ್ತದೆ.

ಅಂತಿಮವಾಗಿ, ಈ ಹೋರಾಟವು ಹೇಗೆ ಶ್ರದ್ಧಾವಂತ, ಬದ್ಧತೆಯುಳ್ಳ ನಾಗರಿಕರ ಒಂದು ಸಣ್ಣ ಗುಂಪು ಸಂವಿಧಾನ ಮತ್ತು ಕಾನೂನಿನಿಂದ ಶಕ್ತಿಪಡೆದು ಅಮೂಲ್ಯವಾದ ರಾಷ್ಟ್ರೀಯ ಸಂಪತ್ತುಗಳಾದ ಮಳೆ ಕಾಡುಗಳು ಮತ್ತು ನದಿಗಳು ಅಭಿವೃದ್ಧಿಯ ನೆಪದಲ್ಲಿ ನಾಶವಾಗುವುದನ್ನು ಸಮರ್ಥವಾಗಿ ತಡೆಯಬಹುದು ಎಂಬುದನ್ನು ತೋರಿಸುತ್ತದೆ.

(ಲೇಖಕ ವೈಲ್ಡ್‌ಲೈಫ್ ಫಸ್ಟ್‌ನ ಟ್ರಸ್ಟಿ) ❖

ಮುನ್ನೋಟ 03-03-2019 ರಿಂದ 09-03-2019

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**

ಸರ್ಕಾರಿ ಕಚೇರಿ ಕೆಲಸಗಳು ಸರಾಗವಾಗಿ ಆಗುತ್ತವೆ. ವ್ಯವಹಾರಗಳಿಗೆ ಬೆಂಬಲ ಕೊಡುವ ಪಕ್ಕಾ ವ್ಯವಹಾರಸ್ಥರೇ ನಿಮ್ಮ ವ್ಯವಹಾರಗಳಿಗೆ ಪಾಲುದಾರರಾಗಿ ದೊರೆಯುವರು. ನಿಮ್ಮ ವರ್ಚಸ್ಸು ವಿಸ್ತರಿಸಲು ಅನುಕೂಲಕರ ಅವಕಾಶಗಳು ದೊರೆಯುತ್ತವೆ, ಅವನ್ನು ಬಳಸಿಕೊಳ್ಳಿ. ಸಮಯಕ್ಕೆ ಸರಿಯಾಗಿ ಕೆಲವು ಕೆಲಸಗಳಾಗುವುದರಿಂದ ಅದರ ಯಶಸ್ಸು ನಿಮಗೆ ದೊರೆಯುತ್ತದೆ.

ವೃಷಭ — **ಕೃತ್ತಿಕಾ 2-3-4, ರೋಹಿಣಿ, ಮೃಗಶಿರ 1-2**

ಧನದ ಒಳ ಹರಿವು ಬಹಳ ಉತ್ತಮ. ವಾಣಿಜ್ಯ ವ್ಯವಹಾರ ಮಾಡುವವರಿಗೆ ಉತ್ತಮ ಲಾಭ ಹಾಗೂ ವ್ಯವಹಾರ ವಿಸ್ತರಣೆಯಾಗುತ್ತದೆ. ನಿಮ್ಮ ಬಂಧುಗಳ, ನೆರೆಹೊರೆಯವರ ವಿಶ್ವಾಸಕ್ಕೆ ಪಾತ್ರರಾಗುವಿರಿ. ಇದರಿಂದ ನಿಮ್ಮ ಕುಟುಂಬದಲ್ಲಿ ಸಂತೋಷವಿರುತ್ತದೆ. ನಿಮ್ಮ ಜನಪ್ರಿಯತೆ ಹೆಚ್ಚಾಗುತ್ತದೆ. ಮಕ್ಕಳ ಮದುವೆ ಒಂದು ನಿರ್ಣಾಯಕ ಹಂತಕ್ಕೆ ಬರುತ್ತದೆ. ಸಂಗಾತಿಯಿಂದ ಸಕಾಲಿಕ ಧನದ ನೆರವು ಬರುವುದು.

ಮಿಥುನ — **ಮೃಗಶಿರ 3-4, ಆರಿದ್ರಾ, ಪುನರ್ವಸು 1-2-3**

ಡೋಲಾಯಮಾನದ ಉದ್ಯೋಗ ಸ್ಥಿತಿ ಪರಿಹಾರವಾಗಿ ಕಾಯಂ ಆಗುವ ಲಕ್ಷಣಗಳಿವೆ. ಇದರಿಂದ ಆರ್ಥಿಕ ಭದ್ರತೆ ಒದಗಿ ಮನಸ್ಸು ಹಗುರಾಗುವುದು. ಅತಿಯಾದ ಲೆಕ್ಕಾಚಾರಗಳು ತಲೆಕೆಳಗಾಗುವ ಸಾಧ್ಯತೆ. ಬಹಳ ದಿನಗಳಿಂದ ಕಾಯುತ್ತಿದ್ದ ಪಿತ್ರಾರ್ಜಿತ ಆಸ್ತಿ ಪಾಲು ಮಾಡುವ ಬಗ್ಗೆ ತೀರ್ಮಾನವಾಗುತ್ತದೆ. ಕುಟುಂಬ ಸಮಸ್ಯೆ ಉಲ್ಬಣ, ಅವುಗಳನ್ನು ನಾಜೂಕಾಗಿ ಮಾತಿನಿಂದ ಪರಿಹರಿಸಿಕೊಳ್ಳಿರಿ.

ಕಟಕ — **ಪುನರ್ವಸು 4, ಪುಷ್ಯ, ಆಶ್ಲೇಷ**

ಸಮೀಪದ ಬಂಧುಗಳು ಅಥವಾ ಸಹೋದ್ಯೋಗಿಗಳು ಅಥವಾ ಮಿತ್ರರಿಂದ ಮೋಸ ಹೋಗುವ ಸಾಧ್ಯತೆ; ಸ್ವಲ್ಪ ಎಚ್ಚರವಾಗಿರಿ. ಯಾರನ್ನೂ ಏಕಾಏಕಿ ನಂಬಬೇಡಿ. ವ್ಯಾಪಾರ ವ್ಯವಹಾರಗಳಲ್ಲಿ ತಕ್ಕ ಮಟ್ಟಿಗೆ ಲಾಭ. ನಿಮ್ಮ ಮಾನಸಿಕ ಚಂಚಲತೆ ನಿಮ್ಮನ್ನೇ ಹೈರಾಣಾಗಿಸುವುದು. ಇದು ನಿಮ್ಮ ವ್ಯವಹಾರದಲ್ಲಿನ ಲಾಭದ ಮೇಲೆ ಪರಿಣಾಮ ಬೀರಬಹುದು. ಸಾಲ ಕೊಡುವುದು, ತೆಗೆದುಕೊಳ್ಳುವುದು ಅಷ್ಟು ಸೂಕ್ತವಲ್ಲ.

ಸಿಂಹ — **ಮಖ, ಪುಬ್ಬ, ಉತ್ತರಾ 1**

ಹಿರಿಯರು ಹಾಕಿ ಕೊಟ್ಟ ಮಾರ್ಗದಲ್ಲಿ ನಡೆಯುವುದು ಕ್ಷೇಮ. ಹಿರಿಯರ ವ್ಯವಹಾರಗಳನ್ನು ವಿವೇಚನೆಯಿಂದ ಮಾಡಿಕೊಂಡು ಮುಂದುವರೆಯುವುದು ಒಳ್ಳೆಯದು. ವ್ಯವಹಾರಗಳಲ್ಲಿ ಹಿತಶತ್ರುಗಳ ಕಾಟ. ಸರ್ಕಾರಿ ಮಟ್ಟದ ಕಾರ್ಯಗಳಲ್ಲಿ ಹೆಚ್ಚಿನ ಅನುಕೂಲ. ವಂಶಪಾರಂಪರ್ಯವಾಗಿ ರಾಜಕೀಯ ಮಾಡುತ್ತಿರುವವರಿಗೆ ಸ್ಥಾನ ದೊರಕದಿದ್ದರೂ ಈಗ ಅವರ ಹೆಸರು ಮುನ್ನೆಲೆಗೆ ಬಂದು ಸ್ಥಾನ ಸಿಗುತ್ತದೆ.

ಕನ್ಯಾ — **ಉತ್ತರಾ 2-3-4, ಹಸ್ತ, ಚಿತ್ತಾ 1-2**

ಆದಾಯದಲ್ಲಿ ಸ್ವಲ್ಪ ಕಡಿತವಾಗಬಹುದು. ಖರ್ಚಿನ ಬಗ್ಗೆ ಸದಾ ಕಾಳಜಿ ಇಟ್ಟು ಅದಕ್ಕೆ ಕಡಿವಾಣ ಹಾಕಿ. ಕೆಲವು ಕೆಲಸಗಳು ಸುಗಮವಾದರೂ ಕೆಲವು ಕೆಲಸಗಳಿಗೆ ಹೆಚ್ಚು ಶ್ರಮ ಬೇಕಾಗುತ್ತದೆ. ಜಮೀನು ಖರೀದಿ ಸ್ವಲ್ಪ ಮುಂದೂಡಿ. ಬಂಧುಗಳ ವಿಶ್ವಾಸವನ್ನು ನೀವು ವೃದ್ಧಿಸಿಕೊಳ್ಳುವುದು ಅನಿವಾರ್ಯ. ಸಭೆಗಳಲ್ಲಿ ವಾಗ್ವಾದ ಅತಿಯಾಗಿ ಮಾಡಿದಲ್ಲಿ ಗೆಲುವು ನಿಮ್ಮದೇ. ವಕೀಲರಿಗೆ ಬಹಳ ಉತ್ತಮ ಕಾಲ.

ತುಲಾ — **ಚಿತ್ತಾ 3-4, ಸ್ವಾತಿ, ವಿಶಾಖೆ 1-2-3**

ಸ್ನೇಹಿತರನ್ನು ಕೂಡಿಕೊಂಡು ಹೊಸ ಕಾರ್ಯ ಮಾಡಲು ಆಲೋಚಿಸುವಿರಿ. ಧನಾದಾಯ ಬಹಳ ಉತ್ತಮ. ಸ್ವಲ್ಪ ಧನ ಉಳಿತಾಯ ಮಾಡುವುದು ಉತ್ತಮ. ಮಿತ್ರರೊಡನೆ ಈ ಹಿಂದೆ ಮಾಡಿದ್ದ ಹಣದ ವ್ಯವಹಾರಗಳಲ್ಲಿ ವ್ಯಾಜ್ಯ ಬರಬಹುದು. ಅವುಗಳನ್ನು ಸಮಾಧಾನವಾಗಿ ಬಗೆಹರಿಸಿಕೊಳ್ಳುವುದು ಉತ್ತಮ. ಇಲ್ಲವಾದಲ್ಲಿ ಧನನಷ್ಟವಾದೀತು. ಅತಿಯಾದ ಮುಂಗೋಪ ಒಳ್ಳೆಯದಲ್ಲ.

ವೃಶ್ಚಿಕ — **ವಿಶಾಖ 4, ಅನೂರಾಧ, ಜ್ಯೇಷ್ಠ**

ಅಂತಿಮ ಫಲಿತಾಂಶ ಬರುವವರೆಗೆ ಕೆಲಸಗಳಲ್ಲಿ ಹುಮ್ಮಸ್ಸು ಕಳೆದುಕೊಳ್ಳಬೇಡಿ. ಕಳೆದುಕೊಂಡಲ್ಲಿ ಎದುರಾಳಿಗೆ ವಿಜಯ. ಧನ ಸಂಪಾದನೆ ಸಾಕಷ್ಟಿರುತ್ತದೆ. ಮಕ್ಕಳ ಉನ್ನತ ವ್ಯಾಸಂಗಕ್ಕೆ ಉತ್ತಮ ಸೌಲಭ್ಯ, ಸೌಕರ್ಯ ಒದಗುತ್ತವೆ. ನಿಮ್ಮ ಕೆಲವು ನಿರ್ಧಾರಗಳ ಸರಿ-ತಪ್ಪುಗಳು ನಿಮ್ಮನ್ನಲ್ಲದೆ, ಕುಟುಂಬದವರಿಗೂ ತಲುಪುತ್ತವೆ.

ಧನುಸ್ಸು — **ಮೂಲ, ಪೂರ್ವಾಷಾಢ, ಉತ್ತರಾಷಾಢ 1**

ಸ್ವಲ್ಪ ಜಾಣತನದಿಂದ ವರ್ತಿಸಿ. ಮೋಸ ಹೋಗುವವರು ಇರುವವರೆಗೂ ಮೋಸ ಮಾಡುವವರು ಇರುತ್ತಾರೆ. ದಿಢೀರ್ ಶ್ರೀಮಂತರಾಗುವುದಕ್ಕೆ ಆಸೆ ಪಡಬೇಡಿ. ನೇರಾನೇರ ವ್ಯವಹಾರ ಬೇಡ. ನಿಮ್ಮ ತಿಳಿವಳಿಕೆ ಮೀರಿದ ಉತ್ತಮ ಶಕ್ತಿಯೊಂದು ನಿಮ್ಮನ್ನು ಪ್ರಚೋದಿಸಿ ಹೊಸ ಶಕ್ತಿ ತುಂಬುತ್ತದೆ. ಹಿರಿಯರು ಮಕ್ಕಳೊಡನೆ ಸರಿಯಾಗಿ ಸಂಬಂಧ ಸ್ಥಾಪಿಸಿಕೊಳ್ಳುವುದು ಅನಿವಾರ್ಯ.

ಮಕರ — **ಉತ್ತರಾಷಾಢ 2-3-4, ಶ್ರವಣ, ಧನಿಷ್ಠ 1-2**

ನಿಮ್ಮ ಶಿಸ್ತು ಮೇಲಧಿಕಾರಿಗಳ ಬಾಯಿ ಮುಚ್ಚಿಸಿ ನಿಮ್ಮ ಬಗ್ಗೆ ಅಭಿಮಾನ ತರುತ್ತದೆ. ಗೆಳೆಯರ ಜೊತೆ ಕಷ್ಟ-ಸುಖ ಹಂಚಿಕೊಳ್ಳಿ. ಆದರೆ ಸ್ವಾಭಿಮಾನಕ್ಕೆ ಧಕ್ಕೆ ತಂದುಕೊಳ್ಳಬೇಡಿ. ಅತಿಯಾದ ದೈಹಿಕ ಶ್ರಮ ಆರೋಗ್ಯದ ಮೇಲೆ ಪರಿಣಾಮ ಬೀರುವುದು. ಸಹೋದ್ಯೋಗಿಗಳ ಜೊತೆ ತುಂಬಾ ಸಲುಗೆ ಬೇಡ. ಮಾತಿನ ನಂಬಿಕೆಯ ಮೇಲೆ ಹಣ ಕೊಡಬೇಡಿ.

ಕುಂಭ — **ಧನಿಷ್ಠ 3-4, ಶತಭಿಷ, ಪೂರ್ವಾಭಾದ್ರ 1-2-3**

ಸಮಾಜದಲ್ಲಿ ಸುಸ್ಥಿತಿಯಲ್ಲಿರುವ ನಿಮಗೆ ಪರಿಸ್ಥಿತಿ ಸಹ ಅನುಕೂಲವಾಗಿರುತ್ತದೆ. ಇದನ್ನು ಸರಿಯಾಗಿ ಬಳಸಿಕೊಳ್ಳಿ. ನಿಮ್ಮ ಜಾಣತನ ನಿಮಗೆ ಅನುಕೂಲ ಮಾಡಿಕೊಡುತ್ತದೆ. ಮನೆ, ಆಸ್ತಿ ಮಾರಾಟ ಮಾಡಿಸುವವರಿಗೆ ಉತ್ತಮ ಕಮಿಷನ್ ದೊರೆಯುತ್ತದೆ. ನಿಮ್ಮ ಪ್ರಗತಿ ಕಂಡು ಬಂಧುಗಳಿಗೆ ಅಸಹನೆ.

ಮೀನ — **ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ**

ಸುತ್ತಿ ಬಳಸಿ ದಾಳಿ ಮಾಡಲು ಹೋಗಬೇಡಿ. ತಾಳ್ಮೆಯಿಂದ ಇದ್ದಲ್ಲಿ ನಿಮಗೆ ದಾಳಿ ಮಾಡಲು ಸೂಕ್ತದಾರಿ ದೊರೆಯುತ್ತದೆ. ನಿಮ್ಮ ಮಾತಾ ಪಿತೃಗಳಿಂದ ನಿಮಗೆ ಬೆಲೆಬಾಳುವ ವಸ್ತುಗಳು ದೊರೆಯುತ್ತವೆ. ಉದ್ಯೋಗದಲ್ಲಿ ಇಷ್ಟು ದಿನದಿಂದ ನಿರೀಕ್ಷಿಸುತ್ತಿದ್ದ ಸ್ಥಾನಮಾನ ದೊರೆಯುತ್ತದೆ. ತಾವು ಮಾಡಿದ ತಪ್ಪನ್ನು ನಿಮ್ಮ ಮೇಲೆ ಹೊರಿಸಲು ಯತ್ನಿಸುವರು, ಸ್ವಲ್ಪ ಎಚ್ಚರವಾಗಿರಿ. ಧನಾದಾಯ ಸಾಮಾನ್ಯ.

ಚಂಡವ್ಯಾಘ್ರನ ದಿಗಿಲು...

(ಮೊದಲ ಪುಟದಿಂದ...)

ಈ ಎಲ್ಲಾ ಕಾರಣದಿಂದ ಬೇಟೆಯ ಸಾಮರ್ಥ್ಯ ಕಳೆದುಕೊಂಡ ಕೆಲವು ಹುಲಿಗಳು, ಚಿರತೆಗಳು ಮನುಷ್ಯನ ಮೇಲೆ ಎರಗಿದ್ದು ದಿಟ.

ನಂತರ ಕಾರ್ಬೆಟ್ ಮತ್ತು ಕೆನೆತ್ ಆಂಡರ್ಸನ್ ಬರೆದ ಬರಹಗಳಲ್ಲಿ ಆ ಹುಲಿಗಳು ನರಭಕ್ಷಕನ ವೇಷತೊಟ್ಟವು. ಅವುಗಳನ್ನು ಕೊಂದವರು, ಕಥೆಯನ್ನು ನಿರೂಪಿಸಿದವರು ನಾಯಕರಾಗಿ ವಿಜೃಂಭಿಸಿದರು. ಆದರೆ, ಗುಂಡೇಟು ತಿಂದು ಸತ್ತ ಹುಲಿಗಳಿಗೆ ತಾವೇಕೆ ನರಭಕ್ಷಕಗಳಾದೆವು? ಎಂದು ಅವರ ಕಥನದಲ್ಲಿ ಹೇಳಲು ಅವಕಾಶವೇ ಇರಲಿಲ್ಲ. ಇದೆಲ್ಲಾ ಚರಿತ್ರೆಪೂರ್ವ ಘಟನೆಗಳೆಂದು ತೀರ್ಮಾನಿಸಿದರೂ ಇಂದೇಕೆ ಹುಲಿಗಳು ಅಲ್ಲೊಮ್ಮೆ, ಇಲ್ಲೊಮ್ಮೆ ಮನುಷ್ಯನ ಮೇಲೆ ಎರಗುತ್ತಿವೆ?

ನರಭಕ್ಷಕ ಆಗುವುದು ಯಾವಾಗ?

ಭಾರತದಲ್ಲಿ ಹುಲಿಗೆ ಇರುವಷ್ಟು ಜನಪ್ರಿಯತೆ ಬೇರೆ ಯಾವ ಪ್ರಾಣಿಗೂ ಇಲ್ಲ. ಎಪ್ಪತ್ತೇಳು ಮಲೆಯ ಒಡೆಯ ಮಹದೇಶ್ವರನಿಗೆ ಹುಲಿಯೇ ವಾಹನ. ಬ್ರಿಟಿಷರ ವಿರುದ್ಧದ ಯುದ್ಧಗಳಲ್ಲಿ ಜಯಗಳಿಸಿದ ಟಿಪ್ಪು ಸುಲ್ತಾನನಿಗೂ 'ಮೈಸೂರು ಹುಲಿ' ಎಂದು ಹೆಸರು ಬಂತು. ಬೆಂಕಿಪೊಟ್ಟಣದಿಂದ ಹಿಡಿದು ಬಿಯರ್‌ವರೆಗೂ, ಐಸ್‌ಕ್ರೀಮ್‌ನಿಂದ ಹಿಡಿದು ವಾರ್ನಿಸ್ ಬಣ್ಣದವರೆಗೂ, ಆಹಾರ ಪದಾರ್ಥಗಳ ಮಾರಾಟಕ್ಕೂ ಹುಲಿಯೇ ಶಕ್ತಿಯುತ ವ್ಯಾಪಾರದ ಸಂಕೇತ.

ಪ್ರಸ್ತುತ ಮನುಷ್ಯ ತಾಂತ್ರಿಕವಾಗಿ ಸಾಕಷ್ಟು ಅಭಿವೃದ್ಧಿ ಸಾಧಿಸಿದ್ದಾನೆ. ಹುಲಿಗಳ ನೆಲೆಯ ಮೇಲೂ ಪ್ರಭುತ್ವ ಸ್ಥಾಪಿಸಿರುವುದು ದಿಟ. ಆದರೆ, ಅವನಲ್ಲಿ ಅವುಗಳ ಬಗ್ಗೆ ಇರುವ ಸಾಂಸ್ಕೃತಿಕ ಆಕರ್ಷಣೆಗೆ ಮಾತ್ರ ಮುಪ್ಪಾಗಿಲ್ಲ. ತನಗಿಂತ ಬಲಶಾಲಿಯಾದ ಪ್ರಾಣಿಗಳ ಬಗ್ಗೆ ಆದಿಕಾಲದಿಂದಲೂ ಮಾನವನಿಗೆ ಅಪರಿಮಿತ ಭಯ. ಇದೇ ಹುಲಿಗಳಿಗೆ ಸುಲಭವಾಗಿ ನರಭಕ್ಷಕನ ಪಟ್ಟ ಕಟ್ಟಲು ಮೂಲಕಾರಣ.

ಕಾಡಿನಲ್ಲಿ ಹುಲಿಗಳ ಜೀವಿತಾವಧಿ 12ರಿಂದ 15 ವರ್ಷ. ಅವು ಎಷ್ಟೇ ಕೌಶಲವಿದ್ದರೂ ಬೇಟೆ ವೇಳೆ ಗಾಯಗೊಳ್ಳುತ್ತವೆ. ಅವುಗಳಿಗೆ ಆ ನೋವು ಸಹಿಸಿಕೊಳ್ಳುವ ಶಕ್ತಿ ಇರುವುದು ಎರಡು ವಾರಗಳು ಮಾತ್ರ. ಈ ಅವಧಿ ದಾಟಿದರೆ ಕ್ರಮೇಣ ದೈಹಿಕವಾಗಿ ಕೃಶವಾಗುತ್ತವೆ. ಇನ್ನೊಂದೆಡೆ ವಯೋಸಹಜವಾಗಿ ಅವುಗಳ ಹಲ್ಲುಗಳು ಸವೆಯುವುದು ಉಂಟು. ಆಗ ಸುಲಭವಾಗಿ ಬೇಟೆ ದಕ್ಕುವುದಿಲ್ಲ. ಆಗ ಬದುಕುಳಿಯುವ ತಂತ್ರವಾಗಿ ಮನುಷ್ಯದ ಮೇಲೆ ಎರಗುತ್ತವೆ.

ಮರಿಗಳ ರಕ್ಷಣೆಗೆ ತಾಯಿ ಹುಲಿ ಹೆಚ್ಚು ಒತ್ತು ಕೊಡುತ್ತದೆ. ಕಾಡಂಚಿನ ಜನರು ಉರುವಲು, ಕಟ್ಟಡದ ಸಾಮಗ್ರಿಗಳಿಗಾಗಿ ಕಾಡಿಗೆ ತೆರಳುವುದು ಸಹಜ. ಈ ವೇಳೆ ಮರಿಗಳ ಹತ್ತಿರ ಸುಳಿದರೆ ದಾಳಿ ಮಾಡುವುದು ನಿಶ್ಚಿತ.

ಹುಲಿಯು ಬಲಿಪ್ರಾಣಿಯನ್ನು ಬೇಟೆಯಾಡಿದ ತಕ್ಷಣ ಇತರೇ ಮಾಂಸಾಹಾರಿ ಪ್ರಾಣಿಗಳಿಗೆ ಸಿಗದಂತೆ ಅದನ್ನು ಬಚ್ಚಿಡುತ್ತದೆ. ಮೂರ್ನಾಕ್ಕು ದಿನಗಳ ಕಾಲ ಆ ಸ್ಥಳದಲ್ಲಿಯೇ ಇದ್ದು ಉಳಿದ ಆಹಾರವನ್ನು ಭಕ್ಷಿಸುತ್ತದೆ. ಕಾಡಂಚಿನ ಕೆಲವು ಜನ ಹುಲಿ ಕೊಂದ ಪ್ರಾಣಿಯ ಮಾಂಸ ಕದಿಯುವುದರಲ್ಲಿ ಸಿದ್ಧಹಸ್ತರು. ಅದು ಬೇಟೆಯಾಡಿದ ಸುಳಿವರಿತು ಅದರ ಊಟ ಕದಿಯುಲು ಹೋದಾಗ ದಾಳಿಗೆ ತುತ್ತಾಗುವ ಸಾಧ್ಯತೆ ಇರುತ್ತದೆ. ಬಹಳಷ್ಟು ದಾಳಿ ಪ್ರಕರಣಗಳಲ್ಲಿ ಈ ಅಂಶ ಬೆಳಕಿಗೆ ಬರುವುದೇ ಇಲ್ಲ.

ಹುಲಿ ಮತ್ತು ಮಾನವನ ನಡುವಿನ ಸಂಘರ್ಷದ ಹಿಂದೆ ರೆಸಾರ್ಟ್ ಹಾವಳಿಯೂ ಕಾರಣವಾಗಿದೆ. ಬಂಡೀಪುರ, ನಾಗರಹೊಳೆಯ ಸುತ್ತಮುತ್ತ ರೆಸಾರ್ಟ್ ಹಾವಳಿ ಮಿತಿಮೀರಿದೆ. ಇನ್ನೊಂದೆಡೆ ಪರಿಸರ ಪ್ರವಾಸೋದ್ಯಮದ ಹೆಸರಿನಡಿ ಅಂಗಡಿಗಳ ಸಂಖ್ಯೆ ದ್ವಿಗುಣಗೊಂಡಿದೆ. ಗೂಡಂಗಡಿಗಳು ನಾಯಿಕೊಡೆಗಳಂತೆ ತಲೆಎತ್ತಿವೆ. ಇಲ್ಲಿಗೆ ಬರುವ ಪ್ರವಾಸಿಗರು ಎಲ್ಲೆಂದರಲ್ಲಿ ಆಹಾರ ಪದಾರ್ಥ ಎಸೆಯುತ್ತಾರೆ. ಈ ಅಳಿದುಳಿದ ಪದಾರ್ಥ ಕಾಡುಹಂದಿಗಳಿಗೆ ಸುಲಭದ ಆಹಾರ.

ಹುಲಿಗಳು ಬಲಿಪ್ರಾಣಿಗಳ ಚಲನವಲನಗಳನ್ನು ಚೆನ್ನಾಗಿ ಪತ್ತೆಹಚ್ಚುವುದು ಕತ್ತಲೆಯಲ್ಲಿಯೇ. ಕಾಡಿನಲ್ಲಿ ಅವು ಮುಸ್ಸಂಜೆಯಿಂದ ಬೆಳಕು ಹರಿಯುವವರೆಗೂ ಓಡಾಡುತ್ತವೆ. ಕಾಡುಹಂದಿಗಳು ಜನಸಂಚಾರ ದಟ್ಟಣೆ ಕಡಿಮೆಯಾದಾಗ ರಾತ್ರಿವೇಳೆ ಸಂಚಾರ ಆರಂಭಿಸುತ್ತವೆ. ಎಲ್ಲ ಅರಣ್ಯದ ವ್ಯಾಪ್ತಿಯಲ್ಲೂ ಸಾಮಾನ್ಯವಾಗಿ ಹುಲಿಗಳು ಕಾಡುಹಂದಿ, ಕೋತಿ, ಮುಳ್ಳುಹಂದಿಗಳನ್ನು ಹುಡುಕಿ ಬೇಟೆಯಾಡುತ್ತವೆ. ಅವುಗಳ ಬೇಟೆ ವೇಳೆ ಆಕಸ್ಮಿಕವಾಗಿ ಮನುಷ್ಯ ಎದುರಾದಾಗ ಅದರ ದಾಳಿಗೆ ಸಿಲುಕುತ್ತಾನೆ.

ದಾಳಿ ಪ್ರಕರಣಗಳು ಹೆಚ್ಚಾಗಿ ಸಂಭವಿಸುವುದು ಕಾಡಂಚಿನಲ್ಲಿಯೇ. ಜನರು ದನ, ಕುರಿ, ಮೇಕೆಗಳನ್ನು ಮೇಯಿಸುವುದು ಈ ಪ್ರದೇಶದಲ್ಲಿಯೇ. ಜಾನುವಾರುಗಳ ಗುಂಪಿನ ಮೇಲೆ ಅವು ದಾಳಿ ಮಾಡುವುದಿಲ್ಲ. ಒಂಟಿ ಇರುವ ಸಾಕುಪ್ರಾಣಿ ಮೇಲೆ ದಾಳಿ ಮಾಡುತ್ತವೆ. ಆ ವೇಳೆ ಅವುಗಳ ಮಾಲೀಕರು ಅದರ ಬಾಯಿಯಿಂದ ಸಾಕುಪ್ರಾಣಿ ಬಿಡಿಸಿಕೊಳ್ಳಲು ಹೋದಾಗ ದಾಳಿಗೆ ತುತ್ತಾಗುತ್ತಾರೆ. ಆಗ ನರಭಕ್ಷಕ ಸುದ್ದಿ ದಟ್ಟವಾಗಿ ಹಬ್ಬುತ್ತದೆ.

ಕಾಡಿನ ಹುಲಿಗಳಿಗೆ ಇರುವ ಒತ್ತಡವೇನು?

ಮೆಕ್ಸಿಕೊದಿಂದ ಬಂದ ಲಂಟಾನಾ ಕಮಾರಾ ಕಳೆಸಸ್ಯ ಕಾಡನ್ನು ಆವರಿಸಿ ಅವುಗಳ ಆಹಾರದ ಮೂಲಕ್ಕೆ ಧಕ್ಕೆ ಒಡ್ಡಿದೆಯೇ? ಗುಣಮಟ್ಟ ಕಳೆದುಕೊಳ್ಳುತ್ತಿರುವ ಅರಣ್ಯದಲ್ಲಿ ಬಲಿಪ್ರಾಣಿಗಳ ಸಂಖ್ಯೆ ಇಳಿಮುಖವಾಗುತ್ತಿದೆಯೇ? ವೃದ್ಧಿಸಿದ ಹುಲಿಗಳ ಸಂಖ್ಯೆ ಪೋಷಿಸಲು ಆ ಕಾಡಿಗೆ ಸಾಧ್ಯವಾಗುತ್ತಿಲ್ಲವೆ? ಈ ಪ್ರಶ್ನೆಗಳನ್ನು ಗಂಭೀರವಾಗಿ ಆಲೋಚಿಸಿ ಪರಿಹಾರ ಕಂಡುಕೊಳ್ಳಬೇಕಾದ ಪರಿಸ್ಥಿತಿ ನಮ್ಮ ಮುಂದಿದೆ. ❖

ಬೆಳ್ಳಿ ತೆರೆಯಲ್ಲಿ...

(ಮೊದಲ ಪುಟದಿಂದ...)

ಸರಬ್ಜಿತ್, ಡ್ಯಾಡಿ, ಪಾನ್‌ಸಿಂಗ್ ತೋಮರ್, ನೇತಾಜಿ ಸುಭಾಷ್‌ಚಂದ್ರ ಬೋಸ್, ದಿ ಲೆಜೆಂಡ್ ಆಫ್ ಭಗತ್ ಸಿಂಗ್, ಮಂಗಲ್ ಪಾಂಡೆ, ರಂಗ್ ರಸಿಯಾ, ಬ್ಯಾಂಡಿಟ್ ಕ್ವೀನ್, ಡಾ. ಪ್ರಕಾಶ್ ಬಾಬಾ ಆಮ್ಟೆ, ಅಂಬೇಡ್ಕರ್, ಕಾಮರಾಜ್... ಪಟ್ಟಿ ಮುಗಿಯುವುದೇ ಇಲ್ಲ! ಅಷ್ಟೇಕೆ, ಹರಿಶ್ಚಂದ್ರನ ಚಿತ್ರ ತೆಗೆದ ದಾದಾಸಾಹೇಬ್ ಫಾಲ್ಕೆ ಜೀವನವೂ ಮತ್ತೊಂದು ಮರಾಠಿ ಚಿತ್ರದ ವಸ್ತುವಾಯಿತು- ಹರಿಶ್ಚಂದ್ರಾಚಿ ಫ್ಯಾಕ್ಟರಿ!

ರಿಚರ್ಡ್ ಅಟೆನ್‌ಬರೋನ 'ಗಾಂಧಿ' ಬ್ರಿಟಿಷ್-ಭಾರತಗಳ ಜಂಟಿ ನಿರ್ಮಾಣದ ಅಮೋಘ ಚಿತ್ರ. ಇದಲ್ಲದೆ ಗಾಂಧೀಜಿ ಬಗ್ಗೆ ಭಾರತದಲ್ಲೇ ಇನ್ನೂ ಹಲವಾರು ಚಿತ್ರಗಳು ಬಂದಿವೆ: ಶ್ಯಾಂ ಬೆನೆಗಲ್‌ರ ಮೇಕಿಂಗ್ ಆಫ್ ದಿ ಮಹಾತ್ಮ, ಗಾಂಧಿ, ಮೈ ಫಾದರ್, ಗಾಂಧಿ ತತ್ವದಿಂದ ರೂಪುಗೊಂಡ ಮೈನೆ ಗಾಂಧಿ ಕೊ ನಹೀ ಮಾರಾ...

ಉಜ್ವಲ ರಾಷ್ಟ್ರನಾಯಕರು, ಹೆಸರಾಂತ ಕೇಡಿಗಳು (ಡ್ಯಾಡಿ, ಹಸೀನಾ ಪಾರ್ಕರ್...), ಇತಿಹಾಸ ಪುರುಷರು, ಜಾನಪದ ನಾಯಕರು- ಇವರೆಲ್ಲರೂ ಚಲನಚಿತ್ರಗಳಿಗೆ ಕಥಾವಸ್ತುವಾಗಿ ಕಂಗೊಳಿಸಿರುವುದು ಒಂದು ಧಾರೆಯಾದರೆ, ಕ್ರೀಡಾಪಟುಗಳನ್ನು ಕುರಿತ ಚಿತ್ರಗಳದ್ದೇ ಮತ್ತೊಂದು ಹೊನಲು. ಎಷ್ಟೊಂದು ಚಿತ್ರಗಳು ಬಂದಿವೆ ನೋಡಿ: ಮಹಿಳಾ ಕುಸ್ತಿಪಟುಗಳಾಗಿ ಒಲಿಂಪಿಕ್ಸ್ ಗಡಿ ಮುಟ್ಟಿದ ಗೀತಾ ಹಾಗೂ ಬಬಿತಾ ಪೊಗಟ್ ಸೋದರಿಯರ ಸಾಹಸಮಯ ಜೀವನ ಕಥನ 'ದಂಗಲ್', 'ಎಂ.ಎಸ್. ಧೋನಿ', ಬಾಕ್ಸಿಂಗ್ ಪಟು 'ಮೇರಿ ಕೋಮ್', ಅಥ್ಲೀಟ್ ಮಿಲ್ಖಾ ಸಿಂಗ್‌ನ ಸಾಧನೆಯನ್ನು ತೆರೆಗೆ ತಂದ 'ಭಾಗ್ ಮಿಲ್ಖಾ ಭಾಗ್', 'ಅಜ್ಹರ್', 'ಬುಧಿಯಾ ಸಿಂಗ್- ಬಾರ್ನ್ ಟು ರನ್', 'ಸಚಿನ್: ಎ ಬಿಲಿಯನ್ ಡ್ರೀಮ್ಸ್', 'ಸೂರ್ಮಾ', 'ಗೋಲ್ಡ್'... ಈ ಪಟ್ಟಿಯೂ ಚಿಕ್ಕದಲ್ಲ. ಇನ್ನು ಕ್ರೀಡೆಗಳನ್ನೇ ಕೇಂದ್ರವಾಗಿಟ್ಟುಕೊಂಡು ಬಂದ ಚಿತ್ರಗಳೂ ಕಮ್ಮಿಯಲ್ಲ. 'ಚಕ್‌ದೇ ಇಂಡಿಯಾ', 'ಸುಲ್ತಾನ್', 'ಆಡುಕಳಂ'... ಈ ಯಾದಿಯಲ್ಲಿ 'ಲಗಾನ್' ಮರೆತವರುಂಟೆ?

ಸಿನಿಮಾ ಮೂಲತಃ ಮನರಂಜನಾ ಮಾಧ್ಯಮ. ಅಷ್ಟಾಗಿಯೂ ಈ ಖ್ಯಾತನಾಮರ ಬಗ್ಗೆ, ಕ್ರೀಡಾಪಟುಗಳ ಬಗ್ಗೆ ಯಾಕಿಷ್ಟು ಆಕರ್ಷಣೆ? ಇದಕ್ಕೆ ಉತ್ತರವಾಗಿ ಸಿನಿಮಾ ಎಂಬ ಕಲಾಮಾಧ್ಯಮದ ಮೂಲ ತಿಳಿವಳಿಕೆಗಳನ್ನು ಗಮನಿಸಬೇಕು.

ದೃಶ್ಯಮಾಧ್ಯಮದಲ್ಲಿ ಬಹುತೇಕ ಎಲ್ಲರೂ ಅನುಸರಿಸುವ ಕಥಾವಿನ್ಯಾಸವೊಂದಿದೆ. ಕಥೆಗೊಬ್ಬ ನಾಯಕ/ ನಾಯಕಿ ಕಡ್ಡಾಯ. ಆತನಿಗೆ/ ಆಕೆಗೆ ದೊಡ್ಡ ಗುರಿಯೊಂದಿದೆ. ಆ ಗುರಿಸಾಧನೆ ಸಲೀಸಲ್ಲ. ಅದಕ್ಕಾಗಿ ಆತ/ ಆಕೆ ಯಮಸಾಹಸ ಮಾಡಿ, ನೂರೆಂಟು ಅಡ್ಡಿ ಆತಂಕಗಳನ್ನು ಎದುರಿಸಿ ಕಟ್ಟಕಡೆಗೆ ಗುರಿ ಮುಟ್ಟಬಹುದು, ಇಲ್ಲವೇ ಸೋಲಬಹುದು. ಕೊನೆಗೆ ಆ ಕೇಂದ್ರ ಪಾತ್ರದ ಗೆಲುವಿನ ಜೊತೆಯೇ ಪ್ರೇಕ್ಷಕರೂ ಗೆದ್ದ ಭಾವ ಅನುಭವಿಸುತ್ತಾರೆ, ಅಥವಾ ಆ ಸೋಲಿಗೆ ನಿಡುಸುಯ್ದು ಚಿತ್ರಮಂದಿರದಿಂದ ಹೊರನಡೆಯುತ್ತಾರೆ.

ಈಗ ಈ ಕಥಾವಿನ್ಯಾಸಕ್ಕೆ ಕ್ರೀಡಾತಾರೆಯ ಅಥವಾ ಇತಿಹಾಸಪುರುಷರ ಜೀವನದ ಏಳುಬೀಳುಗಳು ಹೇಳಿ ಮಾಡಿಸಿದಂತಿಲ್ಲವೇ? ಮೇರಿ ಕೋಮ್ ಜೀವನವನ್ನೇ ಗಮನಿಸಿ. ಗುಡ್ಡಗಾಡಿನ ಪ್ರದೇಶ ಮಣಿಪುರದ ಸರ್ವೇಸಾಧಾರಣ ಕುಟುಂಬದ ಮೇರಿ ಸ್ವಂತ ಬಲದಿಂದ ಅಥ್ಲೀಟ್ ಆಗಿ, ಬಾಕ್ಸರ್ ಆಗಿ, ಮದುವೆ ಮಕ್ಕಳಾದ ಮೇಲೂ, ಬಾಕ್ಸಿಂಗ್‌ನಲ್ಲಿ ದೊಡ್ಡ ಸಾಧನೆ ಮಾಡಲು ಹೆಣಗುವ, ಅದರಲ್ಲಿ ನಿರಂತರ ಪರಿಶ್ರಮದಿಂದ ಯಶಸ್ವಿಯಾಗುವ ಚಿತ್ರಣವದು. ಆಕೆಯ ಕಷ್ಟ ಕಾರ್ಪಣ್ಯ, ಕಡೆಯ ಪಂದ್ಯದ ಸಮಯಕ್ಕೇ ಆಸ್ಪತ್ರೆಯಲ್ಲಿ ಜೀವನ್ಮರಣದ ಹೋರಾಟ ನಡೆಸಿರುವ ಆಕೆಯ ಮಗು... ಭಾವಸಮೃದ್ಧ ಚಿತ್ರಕಥೆ ಹೆಣೆಯಲು ಇಷ್ಟು ಸಾಕಲ್ಲವೇ?

ಆದರೆ ಈ ಭಾವಯಾತ್ರೆ ಸಾಧಿಸುವ ಸಲುವಾಗಿ ನಿರ್ದೇಶಕ ಬಹಳಷ್ಟು ಬಾರಿ ವಾಸ್ತವದಿಂದ ದೂರ ಸರಿದು ಮನಸೋ ಇಚ್ಛೆ ಕಥೆ ತಿರುಚಿಕೊಳ್ಳುವುದಿದೆ. ಏಷ್ಟೆಂದರೂ ಸಿನಿಮಾದಲ್ಲಿ ವಾಸ್ತವಕ್ಕಿಂತ ಭಾವಸಂತೃಪ್ತಿಗೇ ಹೆಚ್ಚು ಬೆಲೆ!

ಎಂ.ಎಸ್. ಧೋನಿ ಚಿತ್ರವನ್ನೇ ನೋಡಿ: ಅದರಲ್ಲಿ ಧೋನಿಯ ಮೊದಲ ಪ್ರೇಮಿ ಪಾತ್ರಧಾರಿ ದಿಶಾ ಪಟಾನಿ ಕಾರು ಅಪಘಾತದಲ್ಲಿ ತೀರಿಹೋದ ಮೇಲೆ ಧೋನಿಗೆ ಪರಿಚಯವಾಗುವವಳು ಸಾಕ್ಷಿ (ಕಿಯಾರಾ ಅಡ್ವಾಣಿ). ಕ್ರಿಕೆಟ್ ಮ್ಯಾಚ್‌ಗೆಂದು ಬಂದು ಆತ ತಂಗಿರುವ ಪಂಚತಾರಾ ಹೋಟೆಲಿನಲ್ಲಿ, ತರಬೇತಿಗಾಗಿ ಬಂದ ಹೋಟೆಲ್ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿ ಸಾಕ್ಷಿ. ಧೋನಿ ಆ ವೇಳೆಗಾಗಲೇ ಖ್ಯಾತ ಕ್ರಿಕೆಟ್ ಪಟುವಾದರೂ, ಈತನಾರೆಂದು ಆಕೆಗೆ ತಿಳಿದಿಲ್ಲ! ಧೋನಿ ಹೋಟೆಲ್ ಪ್ರವೇಶಿಸಿ ರೂಂ ಕೀಲಿ ಕೈ ಕೇಳಿದಾಗ, ಸಾಕ್ಷಿ ಆತನ ಗುರುತಿನ ಚೀಟಿ ಕೇಳುತ್ತಾಳೆ! ಮೊದಲ ನೋಟಕ್ಕೆ ಆಕೆಯ ಮುಗ್ಧತೆ ಈತನನ್ನು ಸೆಳೆಯುತ್ತದೆ. ಆಗ ಧೋನಿ ಗುರುತಿನ ಕಾರ್ಡು ರೂಮಿನಲ್ಲಿದೆ, ನನ್ನೊಂದಿಗೆ ಬನ್ನಿ, ಕೊಡುತ್ತೇನೆ ಎಂದು ಕರೆದೊಯ್ಯುತ್ತಾನೆ. ಆಕೆ ಆ ಕಾರ್ಡು ನೋಡಿ ಇತ್ತ ತಿರುಗುವಷ್ಟರಲ್ಲಿ ಇಡೀ ಹೋಟೆಲ್ ಆತನಿಗಾಗಿ ಹೂಗುಚ್ಛ ಹಿಡಿದು ಕಾದಿದೆ. ಆತ ಧೋನಿ, ಖ್ಯಾತ ಕ್ರಿಕೆಟಿಗ ಎಂದು ಅವಳಿಗೆ ತಿಳಿಯುವುದೇ ಆವಾಗ! ಹಾಗೆ ಶುರುವಾದ ಅವರ ಪರಿಚಯ, ಸ್ನೇಹಕ್ಕೆ, ಪ್ರೀತಿಗೆ ತಿರುಗಿ ಕಡೆಗೆ ಮದುವೆಯಾಗುತ್ತಾರೆ ಎಂಬುದು ಚಿತ್ರದ ಕಥೆ. ಆದರೆ ವಾಸ್ತವವೇನು? ನಿಜಜೀವನದಲ್ಲಿ ಧೋನಿ ಕೈ ಹಿಡಿದ ಸಾಕ್ಷಿ ಸಿಂಗ್ ರಾವತ್, ಧೋನಿ ಓದಿದ ಶ್ಯಾಮಲಿಯ ಡಿಎವಿ ಜವಾಹರ್ ವಿದ್ಯಾಮಂದಿರದಲ್ಲಿ ಆತನ ಸಹಪಾಠಿ!

ಇನ್ನು 'ದಂಗಲ್'ನಲ್ಲಿ ಕುಸ್ತಿ ಕಲೆಯ ಉನ್ನತ ತರಬೇತಿಗಾಗಿ ರಾಷ್ಟ್ರೀಯ ಕ್ರೀಡಾಶಾಲೆ ಸೇರುವ ಗೀತಾ ಪೊಗಟ್‌ಗೆ ಅಲ್ಲಿ ಸಿಕ್ಕುವ ಕೋಚ್ ಕದಂನನ್ನು ಆ ಚಿತ್ರದಲ್ಲಿ ಖಳನಾಯಕನಾಗಿ ಬಿಂಬಿಸಲಾಗಿದೆ. ಗೀತಾ ಚಿಕ್ಕಂದಿನಿಂದಲೂ ತನ್ನ ತಂದೆಯಿಂದ ಕಲಿತ ಕುಸ್ತಿಯ ಶೈಲಿಯೇ ಬೇರೆ. ಈಗ ಕದಂ ಬೇಕಾಗಿಯೇ ಕಲಿಸುವ ಶೈಲಿಯೇ ಬೇರೆ. ಇದು ಕದಂ ಹಾಗೂ ತಂದೆ ಮಹಾವೀರ್ ಸಿಂಗ್ ನಡುವಣ ಜಿದ್ದಿನ ರೂಪ ತಾಳುತ್ತದೆ. ಕ್ಲೈಮ್ಯಾಕ್ಸ್‌ನಲ್ಲಂತೂ, ತಂದೆ ಆ ಪಂದ್ಯಕ್ಕೇ ಕಾಲಿಡದಂತೆ ಆತನನ್ನು ಕೂಡಿಹಾಕಿಬಿಡುತ್ತಾರೆ... ಕಡೆಗೆ ಗೀತಾ ಪದಕ ಗೆದ್ದು ಜನಗಣಮನ ಶುರುವಾದಾಗಲೇ ತನ್ನ ಮಗಳೇ ಚಾಂಪಿಯನ್ ಆಗಿದ್ದೆಂದು ತಂದೆಗೆ ತಿಳಿಯುತ್ತದೆ... ಇಲ್ಲಿ ನಿಜ ಸಂಗತಿಯೇನು?

ವಾಸ್ತವದಲ್ಲಿ ಗೀತಾ ಪೊಗಟ್‌ಗೆ ಅಂಥ ಖಳ ತರಬೇತುದಾರ ಇರಲೇ ಇಲ್ಲ! ಆದರೆ ಸಿನಿಮಾದಲ್ಲಿ ಕಾಣಿಸಿಕೊಳ್ಳುವ ಈ ಬದಲಾವಣೆಗಳು, ಪ್ರೇಕ್ಷಕನನ್ನು ಭಾವನಾತ್ಮಕವಾಗಿ ಸೆಳೆದು ನಿರೂಪಣೆಯಲ್ಲಿ ಮುಳುಗಿಸಿಕೊಳ್ಳುವ ವಿಧಾನಗಳು. ಯಾಕೆಂದರೆ ಸಿನಿಮಾದಲ್ಲಿ ವಾಸ್ತವಕ್ಕಿಂತ ಭಾವಸಮೃದ್ಧಿ ಮುಖ್ಯ. ರಸಾನುಭವ ಮುಖ್ಯ. ಹಾಗಾಗಿ ಇವೆಲ್ಲ ಜೀವನಕಥನಗಳು ಎಂದು ಎಷ್ಟೇ ಬಂಬಡಾ ಬಜಾಯಿಸಿದರೂ, ಅಂತಿಮವಾಗಿ ಸಿನಿಮಾ ಎಂಬುದು ಸಿನಿಮಾನೇ! ❖

ಪದಬಂಧ 2573



ಮೇಲಿನಿಂದ ಕೆಳಕ್ಕೆ
1. ದೇಶಕ್ಕೆ ತೋರುವ ಶ್ರದ್ಧೆ ಪ್ರೇಮ 4
2. ಮೃತ್ಯು ದೇವತೆ ಜನರಿಗಾಗಿ ಕಟ್ಟಿರುವ ಮನೆ 5
3. ಬೆಳಿಗ್ಗೆ, ಮಧ್ಯಾಹ್ನ, ಸೂರ್ಯಾಸ್ತ ಮೂರು ಸಮಯದಲ್ಲೂ ಪೂಜೆಗೆ ಅರ್ಹನಾದವ 5
4. ಕತ್ತಲು ಕಳೆದು ಬೆಳಕು ಹರಿದು ಬರುವ ಮಾರನೆಯ ದಿವಸ 4
6. ವಿರಳವಾಗಿ ಬರುವ ಕರ್ಮ ಗಾಂಧಿಯ ಹೆಸರಿಗೆ ಜೋಡಿಸಿದೆ 3
10. ಉಪ್ಪು ನೀರಿನ ಸಾಗರ 3
12. ಪಂಡರೀನಾಥನ ಪ್ರೇಮ ಪುತ್ಥಳಿ 3
13. ಸಂಪಿಗೆ ಹೂವನ್ನು ಇಷ್ಟಪಡುವ ಸ್ವಾಮಿಯ ಪುಣ್ಯ ಕ್ಷೇತ್ರ 5
14. ಆಡಳಿತ ಸೂತ್ರ ಹಿಡಿಯಲು ಸರ್ಕಸ್ ಮಾಡುವವ 5
15. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜೆಗಳ ಆಳಾಗಿ ದುಡಿಯುವವ 5
16. ನೂಲು ಸೀರೆಯ ನಂಟಿನಂತೆ ಮಾತಾ ಪುತ್ರಿ 5
18. ಪಾರ್ವತಿಯಿಂದ ಜನ್ಮ ತಳೆದವ ತಲೆಕೆಳಗು 3

ಎಡದಿಂದ ಬಲಕ್ಕೆ
1. ಕವಿಗಳಿಗೆ, ಸಾಹಿತಿಗಳಿಗೆ ಅರಸನ ಕಾಲದಲ್ಲಿ ಸಿಗುತ್ತಿದ್ದ ಆಸರೆ 4
3. ಮೂರು ಸಲ ಗೆದ್ದು ಬಂದವ 4
5. ಸುಂದರವಾದ ಮಣಿಯನ್ನು ಕಿವಿಯಲ್ಲಿ ಧರಿಸಿದ ಝಾಂಸಿ ರಾಣಿಯ ಜನ್ಮನಾಮ 5
7. ದ್ರವದಂತೆ ಹರಿವ ಶ್ರದ್ಧೆ, ಪ್ರೇಮ, ಗೌರವ 4
8. ನೂರು ನೂರರ ಸಂಖ್ಯೆಯಲ್ಲಿ ಸೇರುವ ಜನ 4
9. ಒಂಭತ್ತು ಗ್ರಹಗಳ ನಂತರ ನಾವು ಮೊರೆಹೋಗುವ ಹತ್ತನೆ ಭಗವಂತ 5
10. ಹಾಡುವ ಕೋಗಿಲೆ ಬಯಸದ ಬಿರುದು ಮರ್ಯಾದೆ 3
11. ಭಕ್ತಿ ಪರವಶನಾದ ಹಳ್ಳಿಯವನ ದೇವರು 3
13. ಹಾಲು ಬೆಳದಿಂಗಳು ಹರಡುವವನ ಜೊತೆ ನಕ್ಷತ್ರ ರಾಶಿ 4
15. ಉತ್ತರದ 'ಶೇರಾವಾಲಿ'ಗೆ ಜಯಕಾರ 4
17. ರಾಷ್ಟ್ರದ ಗಡಿ ರಕ್ಷಣೆಯ ಪಣ ತೊಟ್ಟವನಿಗೆ ಗೆಲವು 5
19. ಧೀರ್ಘ ಪಡೆದ ಚಿಕ್ಕ ಕತೆ 4
20. ಅನ್ಯರಿಗಾಗಿ ಕೆಲಸಮಾಡುವ ಮಂದಿಯ ಬಿಡದಿ 4
21. ಅಮೂಲ್ಯ ಹರಳನ್ನು ನೀಡಿ ಸತ್ಕಾರ 5
22. ಅಂತಃಪುರದ ರಾಜ ಪತ್ನಿ 4
23. ಮಸುಕಿರುವ ಮಬ್ಬಿನಲಿ ಕೃಪೆ ತೋರೆಂದು ಬೆಳಕಿಗೆ ಕವಿಯ ಆಹ್ವಾನ 4

ಪದಬಂಧ ಉತ್ತರ -2572

ಮೇಲಿಂದ ಕೆಳಕ್ಕೆ

1.ತೇನವಿನಾ 2.ಮಡಿವಂತಿಕೆ 3.ಮನಕಲಕು 4.ಚೂರಿಚಾಕು 8.ಕುಟಿಲತಂತ್ರ 10.ಹಾನಿಕಾರಕ 11.ಸೈನಿಕ 13.ಙರಹ 14.ನಾಟಕ 17.ಗಜವದನ 18.ನರಹಂತಕ 19.ಕ್ಷಾಮಕಾಲ 21.ರುದ್ರಶತ

ಎಡದಿಂದ ಬಲಕ್ಕೆ

1.ಮಧ್ಯಮ 5.ಗಾನಗಾರುಡಿ 6.ನಯಗಾರಿಕೆ 7.ನಾಕುತಂತಿ 9.ಲಗ್ಗೆಹಾಕು 12.ಕೆಣಕು 15.ನಿರ್ಮಲ 16.ಕಾದಾಟ 17.ಗಹನ 19.ಕ್ಷಾತ್ರತೇಜ 20.ರಕ್ಷಕರು 22.ಓಂಕಾರನಾದ 23.ತರುಣಶಕ್ತಿ 24.ನರಕ